**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ**

**ಕೆ.ಆರ್.ನಗರ**

**ಸಿ.ಸಿ. 1229/2017**

ಪಿಡಬ್ಲ್ಯೂ-4

ಸಿಡಬ್ಲ್ಯೂ - 4

| | | |
|---|---|---|
| ಸಾಕ್ಷಿದಾರರ ಹೆಸರು | - | ಶರತ್ |
| ತಂದೆಯ ಹೆಸರು | - | ರಮೇಶ |
| ವಯಸ್ಸು | - | 32 ವರ್ಷ |
| ಕೆಲಸ | - | ಬ್ಯಾಂಕ್ ಅಧಿಕಾರಿ |
| ವಾಸ | - | ಕೆ.ಆರ್.ನಗರ |

**ದಿನಾಂಕ 17-06-2023 ರಂದು ಸಾಕ್ಷಿಯನ್ನು ಕರಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ ಮಾನ್ಯ ಎಪಿಪಿಯವರಿಂದ**

ದಿಃ 25.12.2016 ರಂದು ಸಂಜೆ 6 ಗಂಟೆ ಸಮಯದಲ್ಲಿ ನಾನು ಮತ್ತು ಚಾಸಾ 5 ರವರು ಜಾತ್ರೆಯ ಸಲುವಾಗಿ ಡೋರನಹಳ್ಳಿ ಚರ್ಚ್ ಗೆ ಹೋಗಿದ್ದು ಕೆಲವೊಂದು ಜನ ಸಾರ್ವಜನಿಕರಿಗೆ ತೊಂದರೆಯಾಗುವ ರೀತಿ ಕಿರುಚಾಡುತ್ತಿದ್ದರು ಮತ್ತು ಆರೋಪಿತರು ಸಾರ್ವಜನಿಕರಿಗೆ ಮುಜುಗರ ಆಗುವ ರೀತಿಯಲ್ಲಿ ಮಾತನಾಡುತ್ತಿದ್ದರು.

2. ಪೋಲಿಸನವರು ಸದರಿ ವ್ಯಕ್ತಿಗಳಿಗೆ ಕಿರುಚಾಡಬೇಡಿ ಎಂದು ತಿಳಿಸಿದ್ದು ಸದರಿ ವ್ಯಕ್ತಿಗಳು ಮದ್ಯಪಾನ ಮಾಡಿದ ರೀತಿಯಲ್ಲಿ ಗೋಚರಿಸುತ್ತಿದ್ದರು. ಪೋಲಿಸನವರು ಅವರ ಭಾಷೆಯಲ್ಲಿ ಜೋರಾಗಿ ಸದರಿ ವ್ಯಕ್ತಿಗಳಿಗೆ ತಿಳಿಸಿದ್ದು, ಸದರಿ ವ್ಯಕ್ತಿಗಳು ಪೋಲಿಸನವರಿಗೆ ಬೋಳಿ ಮಕ್ಕಳು ನೀವು ಪೋಲಿಸನವರು ಎಂದು ಬೈದಿರುತ್ತಾರೆ. ಆಗ ಆರೋಪಿತರು ಮತ್ತು ಪೋಲಿಸನವರು ಸ್ವಲ್ಪ ತಳ್ಳಾಡಿರುತ್ತಾರೆ. ನನಗೆ ಆರೋಪಿತರನ್ನು ನೋಡಿ ನಿರ್ದಿಷ್ಟವಾಗಿ ಗುರುತಿಸಲಾಗುವುದಿಲ್ಲ ಎಂದು ತಿಳಿಸಿರುತ್ತಾರೆ.

ಈ ಹಂತದಲ್ಲಿ ಮಾನ್ಯ ಎಪಿಪಿಯವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೋರಿದ್ದರಿಂದ ಅನುಮತಿ ನೀಡಲಾಯಿತು.

**ಪಾಟೀ ಸವಾಲು ಮಾನ್ಯ ಎಪಿಪಿಯವರಿಂದ**

ನ್ಯಾಯಾಲಯದ ಮುಂದಿರುವ ಆರೋಪಿತರೇ ಘಟನೆ ದಿನ ಪೋಲಿಸನವರ ಕೆಲಸಕ್ಕೆ ಅಡ್ಡಿಪಡಿಸಿರುತ್ತಾರೆ ಎಂದರೆ ಸಾಕ್ಷಿ ನನಗೆ ಸರಿಯಾಗಿ ಗೊತ್ತಿರುವುದಿಲ್ಲ ಎಂದು ತಿಳಿಸಿರುತ್ತಾರೆ.

ಈ ಹಂತದಲ್ಲಿ ಆರೋಪಿ ಪರ ವಕೀಲರು ಗೈರು ಹಾಜರಾಗಿದ್ದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

(ನನ್ನ ಉಕ್ತ ಲೇಖನದ ಮೇರೆಗೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇದೆ ಎಂ

(ಚಂದನ್.ಎಸ್ )
ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು,
ಮತ್ತು ಪ್ರದನ್ಯಾದಂ., ಕೆ.ಆರ್.ನಗರ